ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮಗೆ ಲಿಖಿತ ಮೂಲಕ ಕೊಟ್ಟಿದ್ದೇನೆ. ಅದರ ಆಧಾರದ ಮೇಲೆ ತಾವು ಏನು ತೀರ್ಪು ತೆಗೆದುಕೊಳ್ಳುತ್ತಿರೋ, ನಾನು ಅದಕ್ಕೆ ತಲೆ ಬಾಗುತ್ತೇನೆ. ತಾವು ತೀರ್ಮಾನ ತೆಗೆದುಕೊಳ್ಳಬಹುದು.

MR.SPEAKER:- Allright, I will reserve ruling on this.

ಗಮನ ಸೆಳೆಯುವ ಸೂಚನೆಗಳು

(1) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು ಸ್ಥಗಿತಗೊಂಡ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು ಸ್ಥಗಿತಗೊಂಡ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

1. 791 ಕೋಟಿ ರೂ.ಗಳ ಅಂದಾಜು ವೆಚ್ಚದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ 2ನೆಯ ಹಂತಕ್ಕೆ ನೆರವು ನೀಡುವ ಬಗ್ಗೆ ವಿಶ್ವಬ್ಯಾಂಕಿನೊಡನೆ ಜೂನ್ 1989ರಲ್ಲಿ ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ವಿಶ್ವಬ್ಯಾಂಕ್ ನೆರವಿನ ಮೊತ್ತ 325 ಮಿಲಿಯನ್ ಡಾಲರ್‌ಗಳು. ಈ ನೆರವು ಕೊನೆಗೊಳ್ಳುವ ದಿನಾಂಕ 31.12.1996 ಆಗಿರುತ್ತದೆ. 2ನೇ ಹಂತದ ಈ ಯೋಜನೆಯಿಂದ ಸುಮಾರು 1.45 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

2. ಡಾಲರ್ ಮತ್ತು ರೂಪಾಯಿನ ವಿನಿಮಯದಲ್ಲಿ ಆದ ವೆಚ್ಚ ಹೆಚ್ಚಳವನ್ನು ಗಮನಿಸಿ, ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ಈ ಯೋಜನೆಯ ನೆರವಿನ ಮೊತ್ತದಲ್ಲಿ 80 ಮಿಲಿಯನ್ ಡಾಲರ್‌ಗಳನ್ನು 1991ರಲ್ಲಿ ಖೋತಾ ಮಾಡಲಾಯಿತು. ಇದರಿಂದಾಗಿ, ಹಾಲಿ ಇರುವ ನೆರವಿನ ಮೊತ್ತವು 245 ಮಿಲಿಯನ್ ಡಾಲರ್‌ಗಳಾಗಿರುತ್ತದೆ. ಈ ಕ್ರಮದಿಂದ ಯೋಜನೆಯ ಕಾಮಗಾರಿಗಳನ್ನು ಉದ್ದೇಶಿಸಿದಂತೆ ಕಾರ್ಯಗತಗೊಳಿಸುವುದಕ್ಕೆ ಧಕ್ಕೆ ಬರುವುದಿಲ್ಲವೆಂದು ಕೇಂದ್ರ ಸರ್ಕಾರ ಹಾಗೂ ವಿಶ್ವಬ್ಯಾಂಕಿನವರ ಅನಿಸಿಕೆಯಾಗಿದೆ.

3. ವಿಶ್ವಬ್ಯಾಂಕಿನವರ ಮಾರ್ಗ ಸೂಚಿಯ ಪ್ರಕಾರ ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದು ಅವುಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ. 1989ರಲ್ಲಿ ಪ್ರಾರಂಭವಾದ ವಿಶ್ವಬ್ಯಾಂಕ್ ನೆರವಿನ ಈ ಯೋಜನೆಗೆ 1992ರ ನವೆಂಬರ್ ತಿಂಗಳ ಕೊನೆಯವರೆಗೆ ತಗುಲಿರುವ ವೆಚ್ಚ ಸುಮಾರು 184 ಕೋಟಿ ರೂ.ಗಳಾಗಿದ್ದು, ಸುಮಾರು 80 ಕೋಟಿ ರೂ.ಗಳ (ಸುಮಾರು 36 ಮಿಲಿಯನ್ ಡಾಲರ್‌ಗಳು) ಮರು ಪಾವತಿಯನ್ನು (Reimbursement) ಪಡೆಯಲಾಗಿದೆ.

4. ಯೋಜನೆಯಿಂದ ಭಾದಿತರಾದ ಜನರ ಪುನರ್‌ವಸತಿ ಹಾಗೂ ಪುನಶ್ಚೇತನ ಕಾರ್ಯಕ್ರಮವು ಈ ಯೋಜನೆಯ ಒಂದು ಪ್ರಮುಖ ಅಂಗವಾಗಿರುತ್ತದೆ. ವಿಶ್ವಬ್ಯಾಂಕಿನ ವೀಕ್ಷಕ ತಂಡದವರೊಡನೆ ಹಲವಾರು ಬಾರಿ ಚರ್ಚಿಸಿ ಪುನರ್‌ವಸತಿ ನೀತಿಯ ಬಗ್ಗೆ ಈಗಾಗಲೇ ಸರ್ಕಾರದಿಂದ ಆದೇಶಗಳನ್ನು ಹೊರಡಿಸಲಾಗಿದೆ. ಆದಾಗ್ಯೂ ಕೂಡ, ಯೋಜನಾ ಮಟ್ಟದಲ್ಲಿ ಪುನರ್‌ವಸತಿ ಕಾರ್ಯಕ್ರಮದ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಪುನರ್‌ವಸತಿ ನೀತಿಯಲ್ಲಿ

ಆಗಿಂದಾಗ್ಗೆ ಸುಧಾರಣೆಗಳಾಗುತ್ತಿರುವುದು ಅನುಷ್ಠಾನದಲ್ಲಿ ಆಗಿರುವ ವಿಳಂಬಕ್ಕೆ ಒಂದು ಮುಖ್ಯ ಕಾರಣವಾಗಿರುತ್ತದೆ. ಪುನರ್‌ವಸತಿಯ ನೀತಿಯಂತೆ, ಎಲ್ಲಾ ಜಮೀನು ಕಳೆದುಕೊಂಡವರಿಗೆ ಬದಲಿ ಜಮೀನಿನ ಖರೀದಿಗಾಗಿ ಕೊಡಲಾಗುವ ಸಹಾಯಧನ ಭಾಗಶಃ ಜಮೀನು ಕಳೆದುಕೊಂಡವರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು ಬೇಕಾದ ಸಹಾಯಧನ, ಭೂರಹಿತ ಜನರಿಗೆ ಇದೇ ಉದ್ದೇಶಕ್ಕಾಗಿ ಕೊಡಬೇಕಾದ ಸಹಾಯಧನ, ಇವುಗಳನ್ನು ಈಗಿರುವ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಿಸಬೇಕೆಂಬುದು ವಿಶ್ವಬ್ಯಾಂಕಿನವರ ಒಂದು ನಿಬಂಧನೆಯಾಗಿರುತ್ತದೆ. ಇದಲ್ಲದೆ, ಪುನರ್‌ವಸತಿ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದೂ ವಿಶ್ವಬ್ಯಾಂಕಿನವರು ಸೂಚಿಸಿದ್ದಾರೆ. ಭಾದಿತ ಕುಟುಂಬದ ಪ್ರಾಪ್ತ ಮಕ್ಕಳಿಗೂ (Major children) ಸಹ ಪುನರ್‌ವಸತಿ ಸೌಲಭ್ಯ ಕಲ್ಪಿಸಬೇಕೆಂಬ ವಿಶ್ವಬ್ಯಾಂಕಿನ ಷರತ್ತಿನ ಬಗ್ಗೆ ಕಳೆದ ಒಂದು ವರ್ಷದಿಂದಲೂ ಪ್ರಮುಖವಾಗಿ ಚರ್ಚೆ ನಡೆದು ಅಂತಿಮವಾಗಿ ಈ ಷರತ್ತಿಗೆ ಒಪ್ಪಿಕೊಳ್ಳಲಾಗಿದೆ. ಈ ಕಾರಣಗಳಿಂದಾಗಿ ಪುನರ್‌ವಸತಿ ಕಾರ್ಯಕ್ರಮದ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

5. ಈ ರೀತಿಯಾಗಿ ಪುನರ್‌ವಸತಿ ಪ್ರಗತಿಯಲ್ಲಾಗಿರುವ ವಿಳಂಬವನ್ನು ವಿಶ್ವಬ್ಯಾಂಕಿನವರು ಗಂಭೀರವಾಗಿ ಪರಿಗಣಿಸಿ ದಿನಾಂಕ 3.11.1992ರಂದು ತನ್ನ ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುತ್ತದೆ. ವಿಶ್ವಬ್ಯಾಂಕಿನವರು ಸೂಚಿಸಿರುವ ಷರತ್ತುಗಳನ್ನು ಒಪ್ಪಿಕೊಂಡು ಶೀಘ್ರದಲ್ಲೇ ಸೂಕ್ತ ಆದೇಶವನ್ನು ಹೊರಡಿಸಲಾಗುತ್ತದೆ. ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಈಗಾಗಲೇ ಸರ್ಕಾರದ ಮಟ್ಟದಲ್ಲಿ ಹಲವಾರು ಬಾರಿ ಚರ್ಚಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಲಾಗಿದೆ. ಅನುಷ್ಠಾನದಲ್ಲಿ ಪ್ರಗತಿಯನ್ನು ಕಂಡುಕೊಡಲೆ ನೆರವನ್ನು ಪುನರ್ ಆರಂಭಿಸುವುದಾಗಿ ವಿಶ್ವಬ್ಯಾಂಕ್ ತಿಳಿಸಿರುತ್ತದೆ. ಸ್ಥಗಿತಗೊಂಡಿರುವ ನೆರವನ್ನು ತ್ವರಿತವಾಗಿ ಪುನರ್ ಆರಂಭ ಮಾಡುವ ದಿಕ್ಕಿನಲ್ಲಿ ಸರ್ವಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

† ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ದೊಡ್ಡದಾದಂತಹ ಯೋಜನೆ ಅಂದರೆ ಈ ಕೃಷ್ಣಾ ಮೇಲ್ದಂಡೆ ಯೋಜನೆ. ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರ ಹಣವನ್ನು ಪಡೆಯುವುದು ಎಂದರೆ ವಿಶ್ವಬ್ಯಾಂಕಿನ ನೆರವು. ಈ ವಿಶ್ವಬ್ಯಾಂಕಿನಿಂದ ನೆರವು ಪಡೆಯದಿದ್ದಾಗ ಸರ್ಕಾರದವರು ಈ ಯೋಜನೆಯನ್ನು ತಮ್ಮ ಹಣದಿಂದ ಮುಗಿಸಲು ಸಾಧ್ಯವೇ? ಇದು ಪ್ರಶ್ನೆ ಒಂದು. ಎರಡನೆಯದು, ಈ ಯೋಜನೆಗೆ ನೆರವು ನೀಡಲು ವಿಶ್ವಬ್ಯಾಂಕಿನವರು ಏನು ನಿರ್ದಿಷ್ಟವಾದ ಷರತ್ತುಗಳನ್ನು ಹಾಕಿದ್ದಾರೆ. ಆ ಷರತ್ತುಗಳನ್ನು ನಮ್ಮ ಸರ್ಕಾರದವರು ಒಳ್ಳೆಯ ರೀತಿಯಲ್ಲಿ ಮಾಡಿರುವುದಿಲ್ಲ. ಹಾಗೆ ಮಾಡದಿರುವುದರಿಂದ, ಇವತ್ತಿನ ದಿವಸ ಅವರು ಹಣವನ್ನು ಕೊಡುವುದನ್ನು ಸ್ಟಾಪ್ ಮಾಡಿದರು. ಅದನ್ನು ಪುನಃ ಪಡೆಯಲು ಸರ್ಕಾರದವರು ಯಾವ ಯಾವ ಕ್ರಮವನ್ನು ಕೈಗೊಂಡಿರುವರು. ಅವರು ಬಹಳ ಒಳ್ಳೆಯ ಷರತ್ತುಗಳನ್ನು ಹಾಕಿದ್ದಾರೆ. ಯಾರು ಹೊಲ ಮನೆಗಳನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಜಮೀನು ಕೊಡಬೇಕು, ಹಾಗೂ ಒಂದು ಉದ್ಯೋಗ ಅವಕಾಶ ಒದಗಿಸಿಕೊಡಬೇಕು, ಮತ್ತು ಪುನರ್‌ವಸತಿ ಗ್ರಾಮಗಳಲ್ಲಿ ಎಲ್ಲಾ ಸವಲತ್ತುಗಳನ್ನು ಕೊಡಬೇಕು, ಈ ಮೂರು ಷರತ್ತುಗಳನ್ನು ಸರ್ಕಾರದವರು, ಮಾನ್ಯತೆ ಮಾಡಿದರೆ ಈ ಯೋಜನೆಯನ್ನು ಎರಡು ಸಾವಿರ ವರ್ಷದೊಳಗೆ ಮುಗಿಸಲು ಸಾಧ್ಯವಾಗುತ್ತದೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಅವರ ಮೊದಲ ಪ್ರಶ್ನೆ ವಿಶ್ವಬ್ಯಾಂಕ್ ಯೋಜನೆಯ ನೆರವು ಇಲ್ಲದೆ ರಾಜ್ಯ ಸರ್ಕಾರವೇ ಹಣ ಖರ್ಚು ಮಾಡಿ ಈ ಯೋಜನೆಯನ್ನು ಮುಗಿಸಲು ಸಾಧ್ಯವೇ? ಅದು ಸಾಧ್ಯವಿಲ್ಲ. ಇನ್ನು ಎರಡನೆಯ ಪ್ರಶ್ನೆ ಅವರು ಕೆಲವು ಷರತ್ತುಗಳನ್ನು ಹಾಕಿದ್ದಾರೆ ಎಂಬುದು. ಹಾಗೂ ಆ ಷರತ್ತುಗಳನ್ನು ನಾನು ಒಪ್ಪದೇ ಇರುವುದರಿಂದ ಅದನ್ನು ಇಂಪ್ಲೀಮೆಂಟ್ ಮಾಡುವುದರಲ್ಲಿ ವಿಳಂಬ ಆಗಿರುವುದರಿಂದ ಹಣವನ್ನು ಕೊಡುತ್ತಿದ್ದನ್ನು

ಸ್ಥಗಿತ ಮಾಡಿದ್ದಾರೆ ಎಂಬುದು. ಈ ಬಗ್ಗೆ ಈಗಾಗಲೇ ಮೀಟಿಂಗ್ ಮಾಡಿ ತೀರ್ಮಾನ ತೆಗೆದುಕೊಂಡಿದ್ದೇವೆ. ವಿಶ್ವ ಬ್ಯಾಂಕ್‌ನವರು ಕೂಡ ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ. 17–18ನೇ ತಾರೀಖು ಅವರು ಬರುವವರಿದ್ದಾರೆ. Suspension of release of funds ಆ ಬ್ಯಾನ್ ಅನ್ನು ಶಿಫ್ಟ್ ಮಾಡುತ್ತಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಅವರು ಏನು ಹೇಳುತ್ತಾರೆ ಎಂದರೆ ಒಳ್ಳೆಯ ರೀತಿ ರಸ್ತೆಗಳನ್ನು ಮಾಡಬೇಕು, ಅಂಡರ್ ಗ್ರೌಂಡ್ ರಸ್ತೆ ಮಾಡಬೇಕು ಕುಡಿಯುವ ನೀರನ್ನು ಒದಗಿಸಬೇಕು ಅಂತಹ ಸರ್ವಿಸನ್ನು ಮಾಡದೇ ಇರುವುದರಿಂದ ಈಗ ತೊಂದರೆಯಾಗಿದೆ. ಮಲಪ್ರಭ ಯೋಜನೆಯಲ್ಲಿಯೂ ಸಹಾ ಅಂಡರ್ ಗ್ರೌಂಡ್ ಯೋಜನೆ ಮಾಡಬೇಕೆಂದು ಅವರು ಡೈರಕ್ಷನ್ ಕೊಟ್ಟಿದ್ದರು ಅದನ್ನು ನೀವು ಮಾಡಲಿಕ್ಕೆ ತಯಾರಿಲ್ಲ. ಹಿಂದಿನ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರು ಮಲಪ್ರಭಾ ಯೋಜನೆಯಲ್ಲಿ ಅಂಡರ್ ಗ್ರೌಂಡ್ ಮಾಡಬೇಕು ಮಾಡದಿದ್ದರೆ ವಿಶ್ವಬ್ಯಾಂಕ್ ನೆರವು ನಿಲ್ಲಿಸುತ್ತಾರೆ ಎಂದು ಸೆಕ್ಷೆನ್ 5ರ ಪ್ರಕಾರ ನೀರಾವರಿ ಇಲಾಖೆಯ ಕಾರ್ಯದರ್ಶಿಯವರಿಗೆ ಡೈರಕ್ಷನ್ ಕೊಟ್ಟರು ಆದರೆ ಅದನ್ನೂ ಮಾಡಲಿಲ್ಲ. ಇವತ್ತು ಯಾವುದೇ ಮಂತ್ರಿಗಳು ಕಾರ್ಯದರ್ಶಿಯವರಿಗೆ ಡೈರಕ್ಷನ್ ಕೊಟ್ಟರೆ ಆ ರೀತಿಯಂತೆ ಮಾಡಲು ಅವರುಗಳು ತಯಾರಿಲ್ಲ. ಈ ಪ್ರಕಾರ ನೀವು ಮಾಡಿದರೆ ಎರಡು ಸಾವಿರ ವರ್ಷದವರೆಗೂ ಯು.ಕೆ.ಪಿ. ಯೋಜನೆ ಮುಗಿಸಲು ಸಾಧ್ಯವಿಲ್ಲ. ಆದ್ದರಿಂದ ಯಾವ ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಜಮೀನು ಕಳೆದುಕೊಂಡವರ ಮಕ್ಕಳಿಗೆ ಉದ್ಯೋಗ ಕೊಡಲಿಕ್ಕೆ ತಯಾರಿಲ್ಲ. ಇತರ ಸೌಲಭ್ಯಗಳನ್ನು ಕೊಡಲಿಕ್ಕೆ ತಯಾರಿಲ್ಲ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಆಗ್ರಹಪಡಿಸುತ್ತೇನೆ. ಅಂದರೆ ಅಂಡರ್ ಗ್ರೌಂಡ್ ಯೋಜನೆ ಮಾಡಲು ಕಾಯಿದೆ ಇದ್ದರೂ ಕೂಡ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಧೋರಣೆಯಿಂದ ಈಗ ಬಹಳ ತಪ್ಪಾಗುತ್ತಿದೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಪುನರ್‌ವಸತಿ ಎಂದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಗ್ರಾಮಗಳನ್ನು ಶಿಫ್ಟ್ ಮಾಡತಕ್ಕದ್ದು . ಹೀಗೆ ಶಿಫ್ಟ್ ಮಾಡಬೇಕಾದರೆ ಜನ ಏತಕ್ಕೆ ಹೋಗುವುದಿಲ್ಲ ಎಂದರೆ ಅಲ್ಲಿ ಏನೂ ಫೆಸಿಲಿಟಿಸ್ ಇಲ್ಲದಿದ್ದುದರಿಂದ ಆದಕ್ಕೋಸ್ಕರ ವಿಶ್ವ ಬ್ಯಾಂಕ್‌ನವರು All Civic amenities should be provided in a new village before they are shifted ಎಂದು ಹೇಳಿದ್ದಾರೆ. ಅಂಡರ್ ಗ್ರೌಂಡ್ ಡ್ರೈನೇಜ್, ರಸ್ತೆ, ಸ್ಕೂಲ್, ಆಸ್ಪತ್ರೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇವುಗಳನ್ನೆಲ್ಲಾ ಮಾಡಬೇಕೆಂದು ಹೇಳುತ್ತಾರೆ. ನಾವು ಅವರಿಗೆ ಹೇಳಿದ್ದೇವೆ. ಒಂದು ಮೀಟಿಂಗ್ ಮಾಡಿ ಏನು ಷರತ್ತುಗಳನ್ನು ಹಾಕುತ್ತಾರೆ ಅದನ್ನು ಒಪ್ಪಿಕೊಳ್ಳುವ ಬಗ್ಗೆ ವಿಚಾರ ಮಾಡುತ್ತೇವೆ ಎಂದು. They are also happy. The matter will be implemented early.

ಶ್ರೀ ಬಿ. ಹಂಪನ ಗೌಡ:– ಅಪ್ಪರ್ ಕೃಷ್ಣ ಯೋಜನೆಯಲ್ಲಿ ರೈಟ್ ಬ್ಯಾಂಕ್ ಏನಿದೆ. ಆ ಕೆಲಸಕ್ಕಾಗಿ ಇಲ್ಲಿಯವರೆಗೆ ಹಣ ಕೊಟ್ಟಿಲ್ಲ ಆದ್ದರಿಂದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ....

ಅಧ್ಯಕ್ಷರು:– ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಈಗ ನಮ್ಮ ಮುಂದೆ ಇರುವ ವಿಷಯ ವಿಶ್ವ ಬ್ಯಾಂಕ್ ನೆರವು ಸ್ಥಗಿತಗೊಂಡ ಬಗ್ಗೆ ಮಾತ್ರ. ಶ್ರೀ ಎಂ.ಎಸ್. ಆತ್ಮಾನಂದರವರು ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ಜಮೀನಿಗೆ ನೀರೊದಗಿಸುವ ವಿ.ಸಿ. ನಾಲಾ ಆಧುನೀಕರಣ ಕಾರ್ಯ ಕೈಗೊಂಡು ಸುಮಾರು ಹದಿನೈದು ವರ್ಷಗಳು ಕಳೆದರೂ ಅದು ಪೂರ್ಣಗೊಳ್ಳದೇ ಕೋಟ್ಯಾಂತರ ರೂಪಾಯಿ ಬೆಳೆಗೆ ನಷ್ಟ ಉಂಟಾದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುವುದು.

ಶ್ರೀ ಎಂ.ಎಸ್. ಆತ್ಮಾನಂದ:- ಸನ್ಮಾನ್ಯ ಸಭಾಧ್ಯಕ್ಷರೆ ನಾನು ಈ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡುವುದಿಲ್ಲ. ವಿ.ಸಿ. ನಾಲಾ ಆಧುನೀಕರಣ ಕಾರ್ಯವನ್ನು ಶೀಘ್ರಗತಿಯಲ್ಲಿ ಮುಗಿಸಿಕೊಡಬೇಕೆಂದು ಸರ್ಕಾರವನ್ನು ಕೋರುತ್ತೇನೆ.

2) 40 ಕಿರು ಸಿಮೆಂಟ್ ಕಾರ್ಖಾನೆಗಳ ಮುಚ್ಚು ವಿಕೆಯಿಂದುಂಟಾದ ನಷ್ಟ.

ಶ್ರೀ ಟಿ.ಬಿ. ಜಯಚಂದ್ರ:- ರಾಜ್ಯದಲ್ಲಿ ಸುಮಾರು 100 ಕೋಟಿ ರೂಪಾಯಿ ಬಂಡವಾಳ ಹೂಡಿರುವ 40 ಕಿರುಸಿಮೆಂಟು ಕಾರ್ಖಾನೆಗಳ ಮುಚ್ಚುವಿಕೆಯಿಂದ ಒದಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಸದನದ ಮುಂದೆ ಮಂಡಿಸಲಿಚ್ಚಿಸುತ್ತೇನೆ.

1. In the early 1980s, in view of scarcity of cement, several entrepreneurs took up smaller projects for establishments of Mini Cement Plants of 30/60/100/200 TPD capacity, using Vertical Shaft Kiln (VSK) technology of the Cement Research Institute (CRI), New Delhi.

2. In all 47 such Mini cement plants of capacity ranging from 30 to 200 TPD were taken up for implementation during the last 10 years. Out of these, 37 units have already gone into production and 10 units are yet to go into production.

3. Units started in the early 1980s upto 1985-86 were benefitted by favourable market conditions, whereas units started subsequently could not compete in the market due to competition from major cement plants, whose capacity also expanded during this period.

ಶ್ರೀ ವಾಟಾಳ್ ನಾಗರಾಜ್:- ನಾವು ಈ ಸ್ಥಾನದಲ್ಲಿ ಕುಳಿತು ಹೇಳಿಕೆಗಳು ಕನ್ನಡದಲ್ಲಿ ಬರಬೇಕೆಂದು ನಿನ್ನೆ ಹೇಳಿದೆವು, ಮೊನ್ನೆ ಹೇಳಿದೆವು. ನಾನು ಒಬ್ಬನೇ ಏನೋ ಇದನ್ನು ಕೇಳುತ್ತೇನೆ ಎನ್ನುವ ಉದ್ದೇಶ ಎಂದು ಯಾರೂ ತಿಳಿದುಕೊಳ್ಳಬಾರದು. ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ. ಕನ್ನಡದಲ್ಲಿ ಹೇಳಿಕೆಗಳನ್ನು ಕೊಡಿ ಎಂದು ಅನೇಕ ಸಚಿವರುಗಳಿಗೆ ಕೇಳುತ್ತಾ ಬಂದಿದ್ದೇನೆ. ಅಧಿಕಾರಿಗಳು ಇಂಗ್ಲೀಷಿನಲ್ಲಿ ಕಳುಹಿಸುತ್ತಾರೆ. ಇವರು ಅಧಿಕಾರಿಗಳಿಗೆ ಹೇಳಬೇಕು. ನಿನ್ನೆ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿಕೆ ಕೊಡುವಾಗ ಇದೇ ಸಂದರ್ಭ ಬಂದಾಗ ಅವರು ಒಂದು ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಕೊಡುವುದನ್ನು ನಿಲ್ಲಿಸಿ ನಾಳೆ ಕನ್ನಡದಲ್ಲಿ ಕೊಡುತ್ತೇನೆಂದು ಹೇಳಿದರು. ಆದರೂ ಈಗ ಅದೇ ಮುಂದುವರೆಯುತ್ತಿದೆ. ಇದರಿಂದ ನನಗೆ ನೋವು ಆಗುತ್ತಿದೆ. ಇದು ಬರೀ ವಾಟಾಳ್ ನಾಗರಾಜ್ ಒಬ್ಬರೇ ಕೇಳುತ್ತಾರೆಂದು ಅಲ್ಲ. ಖರ್ಗೆಯವರ ಬಗ್ಗೆ ನನಗೆ ಅತ್ಯಂತ ಗೌರವ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ನಾಲ್ಕು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸುತ್ತೋಲೆಗಳನ್ನು ಕನ್ನಡದಲ್ಲೇ ಕೊಡುತ್ತೇವೆ, ವಿಧಾನಸಭೆಯಲ್ಲಿ ಕನ್ನಡದಲ್ಲಿ ಆರಂಭ ಮಾಡುತ್ತೇವೆ ಎಂದೆಲ್ಲಾ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸಾಮಾನ್ಯ ರೈತರ ಮಕ್ಕಳು ಆಯ್ಕೆಯಾಗಿ ಇಲ್ಲಿ ಬಂದಿದ್ದಾರೆ. ಒಂದು ರೀತಿ ಚಂಡಿ ಕಥೆ ಇಲ್ಲಿ ಆಗಿದೆ. ಕನ್ನಡ ಜಾರಿ ಆಗಬೇಕು, ಎಲ್ಲವೂ ಕನ್ನಡದಲ್ಲಿ ಬರಬೇಕೆಂದು ಒತ್ತಾಯ ಮಾಡಿದಮೇಲೆ, ಕಳೆದ 3 ದಿವಸಗಳಿಂದ ಪ್ರತಿಯೊಂದೂ